# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 121/2019**

| | | |
|---|---|---|
| ಸಾಕ್ಷಿದಾರರ ಹೆಸರು | : ದಿನೇಶ್ | ಪಿಡಬ್ಲ್ಯೂ : 8 |
| ತಂದೆಯ / ಗಂಡನ ಹೆಸರು | : ಲೇಟ್ ವೆಂಕಟೇಶ್ | ಸಿಡಬ್ಲ್ಯೂ : 6 |
| ವಯಸ್ಸು | : 48 ವರ್ಷ | |
| ಉದ್ಯೋಗ | : ಗಾರೆ ಕೆಲಸ | |
| ವಾಸಸ್ಥಳ | : ಶಿವರಾತ್ರೇಶ್ವರನಗರ, ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 18.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ಈ ಪ್ರಕರಣದ ಸಾಕ್ಷಿದಾರರಾದ ಚಾಸಾ.7 ಮತ್ತು 8 ರವರ ಪರಿಚಯ ಇರುತ್ತದೆ. 1 ನೇ ಆರೋಪಿಯನ್ನು ನಾನು ನೋಡಿರುತ್ತೇನೆ. ಅವರ ಪರಿಚಯ ಇರುತ್ತದೆ. 2018 ರಲ್ಲಿ ಚಾಸಾ.2 ರವರು ಗುಣಮುಖರಾದ ಮೇಲೆ ಒಂದು ವಾರದ ಬಳಿಕ ನಾನು ಮೇಟಗಳ್ಳಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಠಾಣೆಗೆ ಹೋದಾಗ ನನಗೆ ಪಂಚರಾಗಬೇಕೆಂದು ಹೇಳಿ ಪೊಲೀಸರು ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯೂ ಸದರಿ ನೋಟೀಸ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.25 ಎಂದು, ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು

ಗುರುತಿಸಲಾಯಿತು. ಅದೇ ಸಮಯದಲ್ಲಿ ನಾನು ಪಂಚನಾಗುತ್ತೇನೆ ಎಂದು ಹೇಳಿ ಬಾಂಡ್ ಗೆ ಕೂಡ ಸಹಿ ಮಾಡಿರುತ್ತೇನೆ. ಸಾಕ್ಷಿಯೂ ಸದರಿ ಬಾಂಡ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.26 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 26(ಎ) ಎಂದು ಗುರುತಿಸಲಾಯಿತು.

3. ಮೇಟಗಳ್ಳಿ ಪೊಲೀಸ್ ಠಾಣೆಯಿಂದ ಹರೀಶ 1 ನೇ ಆರೋಪಿ, ಪೊಲೀಸರು ಮತ್ತು ನಾವುಗಳು ಶಿವರಾತ್ರೇಶ್ವರನಗರ ಮತ್ತು ಉನ್ನತಿನಗರದ ಮಧ್ಯದಲ್ಲಿ ಚರ್ಚ್ ನ ಎದುರುಗಡೆ ಮಾಳ ಇರುತ್ತದೆ. ನಾವು ಅಲ್ಲಿಗೆ ಹೋಗಿರುತ್ತೇನೆ. ಅಲ್ಲಿ 1 ನೇ ಆರೋಪಿ ಗಿಡದ ಮಧ್ಯದಿಂದ ಒಂದು ಲಾಂಗ್ ಮತ್ತು ಬಟ್ಟೆಗಳನ್ನು ತೆಗೆದು ಹಾಜರುಪಡಿಸಿರುತ್ತಾರೆ. ಸದರಿ ಮಚ್ಚಿಗೆ ಮುಂದುಗಡೆ ಸ್ವಲ್ಪ ರಕ್ತದ ಕಲೆಯಾಗಿದ್ದು, ಸದರಿ ಮಚ್ಚು ಮತ್ತು ಬಟ್ಟೆಗಳನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು, ಬ್ಯಾಗ್ ನಲ್ಲಿ ಹಾಕಿ ಸೀಲ್ ಮಾಡಿಕೊಂಡರು. ಸದರಿ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿದ್ದು, ಸದರಿ ಬರವಣಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಿ.04.10.2018 ರ ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ.27 ಎಂದು, ಸಾಕ್ಷಿಯ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುತ್ತದೆ. ಸದರಿ ಮಚ್ಚು ಮತ್ತು ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಎಂಒ-1 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯೂ ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಲ್ಲಿ ಸುತ್ತಿ ಸುಸ್ಥಿತಿಯಲ್ಲಿದ್ದ ವಸ್ತುಗಳನ್ನು, ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ನೋಡಲಾಗಿ ಅದರಲ್ಲಿ ಹಳದಿ ಬಣ್ಣದ ಶರ್ಟ್ ಇದ್ದು , ಎಂಒ-10 ಎಂದು ಗುರುತಿಸಲಾಯಿತು. ಸದರಿ

ಮುದ್ದೆ ಮಾಲುಗಳ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಮಹಜರ್ ಕಾಲದಲ್ಲಿ ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ 14 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾರೆಯಾಗಿ ನಿಪಿ.28 ಎಂದು ಗುರುತಿಸಲಾಯಿತು.

4. ನಂತರ ಸದರಿ ಸ್ಥಳದಿಂದ ಚಾಸಾ.2 ನಾರಾಯಣರವರ ಕಚೇರಿಯ ಬಳಿ ನಮ್ಮನ್ನು ಮತ್ತು ಪೊಲೀಸರನ್ನು 1 ನೇ ಆರೋಪಿ ಕರೆದುಕೊಂಡು ಹೋಗಿದ್ದು , ಸದರಿ ಸ್ಥಳದಲ್ಲಿ ಘಟನೆಯಾಗಿ ಹಲ್ಲೆ ಮಾಡಿರುವ ಸ್ಥಳ ಎಂದು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಫೋಟೊಗಳನ್ನು ಸಹ ತೆಗೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ.29 ಎಂದು ಗುರುತಿಸಲಾಯಿತು. ಸದರಿ ಮಹಜರ್ ಜರುಗಿಸುವ ಕಾಲಕ್ಕೆ ಸಮಯ 12.30–12.45 ಆಗಿತ್ತು.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ</u>**

5. ನೀವು ಮಹಜರ್ ನಡೆದ ದಿನ ಎಲ್ಲೆಲ್ಲಿ ಹೋಗಿರುತ್ತೀರಿ ಎಂದರೆ ಸಾಕ್ಷಿಯೂ ಮೇಟಗಳ್ಳಿ ಪೊಲೀಸ್ ಠಾಣೆಯಿಂದ ಉನ್ನತಿನಗರದ ಚರ್ಚ್ ಬಳಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಆರೋಪಿತರನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ. ಪೊಲೀಸ್ ಠಾಣೆಯಿಂದ ಹೊರಟು ವಾಪಾಸ್ ಪೊಲೀಸ್ ಠಾಣೆಗೆ ಬಂದು ಮನೆಗೆ ಹೋಗಿರುತ್ತಿರೀಯೇ ಎಂದರೆ ಸಾಕ್ಷಿಯೂ ನಾನು ನಾರಾಯಣ ರವರ ಕಚೇರಿಯಿಂದಲೇ ನಾನು ಮನೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ

ಮಹಜರ್ ನಲ್ಲಿರುವ ಒಕ್ಕಣೆಯನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರು ಬರಹಗಾರಿಗೆ ಹೇಳಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಹಜರ್ ನಲ್ಲಿ ಏನು ಬರೆದಿದೆ ಎಂದು ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆ ಯಿಂದ ಹೊರಟು ಸತ್ಯನ್ ಅಂಗಡಿಯ ಬಳಿಗೆ ಮತ್ತು ಅಲ್ಲಿಂದ ನಾರಾಯಣ ರವರ ಕಚೇರಿಯ ಬಳಿ ಹೋಗಿ ವಾಪಾಸ್ ಬರುವವರೆಗೆ ಆರೋಪಿ ಮಾತನಾಡಿರುತ್ತಾನೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಲಾಂಗ್ ಎಲ್ಲಿ ಬಿದ್ದಿತ್ತು ಎಂದರೆ ಸಾಕ್ಷಿಯೂ ಉನ್ನತಿನಗರದ ಚರ್ಚ್ ಬಳಿಯ ಪೊದೆಯಲ್ಲಿ ಬಿದ್ದಿತ್ತು ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಿಂದ ಎಲ್ಲರೂ ಒಟ್ಟಿಗೆಯೇ ಹೋಗಿರುತ್ತೀರಿಯೇ ಎಂದರೆ ಸಾಕ್ಷಿಯೂ ಒಂದು ಜೀಪಿನಲ್ಲಿ 4 ಜನ, ಇನ್ನೊಂದು ಜೀಪಿನಲ್ಲಿ 4 ಜನ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿ ಇದ್ದ ಜೀಪು ಮುಂದೆ ಇತ್ತೇ ಅಥವಾ ನೀವು ಇದ್ದ ಜೀಪು ಮುಂದೆ ಇತ್ತೇ ಎಂದರೆ ಸಾಕ್ಷಿಯೂ ಆರೋಪಿ ಇದ್ದ ಜೀಪು ಮುಂದೆ ಇತ್ತು ಎಂದು ನುಡಿಯುತ್ತಾರೆ. ನೀವು ಹಿಂದೆ ಇದ್ದ ಜೀಪಿನಲ್ಲಿ ಇದ್ದ ಕಾರಣ ಆರೋಪಿ ಇದ್ದ ಜೀಪಿನಲ್ಲಿ ಯಾರ ಹೇಳಿಕೆಯ ಮೇರೆಗೆ ಸದರಿ ಸ್ಥಳಕ್ಕೆ ಜೀಪು ಹೋಗಿರುತ್ತದೆ ಎಂದು ತಿಳಿದಿರುವುದಿಲ್ಲ ಎಂದರೆ ಸರಿ. ಸ್ಥಳದಲ್ಲಿ ಇಳಿದು ಸ್ಥಳವನ್ನು ಯಾರು ಪರಿಶೀಲನೆ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರು ಪರಿಶೀಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆಗ ಸದರಿ ಸ್ಥಳದಲ್ಲಿ ಮಚ್ಚು ಸಿಕ್ಕಿರುತ್ತದೆಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯೂ ಮುಂದುವೆರದು ಹರೀಶ್ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ.

6. ಹರೀಶನು ಓಡಿ ಹೋಗಬಾರದು ಎಂದು ಕೋಳ ಹಾಕಲಾಗಿತ್ತೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಪೂರ್ಣ ಪ್ರಕ್ರಿಯೆ ಮುಗಿಯುವರೆಗೆ ಆರೋಪಿಯನ್ನು ಜೀಪಿನಲ್ಲಿಯೇ ಕೂರಿಸಿರುತ್ತಾರೆಯೇ ಎಂದರೆ ಸಾಕ್ಷಿಯೂ ಜೊತೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಲಾಂಗ್ ನ್ನು ಚೀಲದಲ್ಲಿ ಹಾಕಿರುತ್ತಾರೆ ಎಂದು ಹೇಳಿದ್ದು, ಸದರಿ ಚೀಲವನ್ನು ಠಾಣೆಯಿಂದಲೇ ತೆಗೆದುಕೊಂಡು ಹೋಗಲಾಗಿತ್ತೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಸದರಿ ಲಾಂಗ್ ಚೀಲದಲ್ಲಿ ಸರಿಯಾಗಿ ಹಿಡಿದಿರುತ್ತದೆಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಯಾರು ಕೂಡ ಮೇಣದ ಬತ್ತಿ ಹಚ್ಚಿರುವುದಿಲ್ಲ, ಕಡ್ಡಿ ಗೀರಿರುವುದಿಲ್ಲ ಎಂದರೆ ಸಾಕ್ಷಿಯೂ ಹೌದು ಎಂದು, ಮುಂದುವರೆದು ಸೀಲ್ ಮಾಡಿದರು ಎಂದು ನುಡಿಯುತ್ತಾರೆ. ಸೀಲ್ ಮೇಲೆ '**S**' ಅಕ್ಷರದಿಂದ ಸೀಲು ಮಾಡಲಾಯಿತು. ಅದನ್ನು ಸೀಸದ ಸೀಲಿನಿಂದ ಹಾಕಿರುತ್ತಾರೆಯೇ ಅಥವಾ ಪ್ಲಾಸ್ಟಿಕ್ ಸೀಲ್ ನಿಂದ ಹಾಕಿರುತ್ತಾರೆಯೇ ಎಂದರೆ ಸಾಕ್ಷಿಯೂ ಸೀಸದ ಸೀಲಿನಿಂದ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ '**S**' ಎಂಬ ಅಕ್ಷರದ ಸೀಲ್ ನ್ನು ಯಾರ ಕೈ ಯಲ್ಲಿ ನೀಡಿರುತ್ತಾರೆ ಎಂದರೆ ಸಾಕ್ಷಿಯೂ ಪೊಲೀಸರೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಪೊಲೀಸ್ ಠಾಣೆಯಲ್ಲಿ ಕುಳಿತು ಬರೆದ ಮಹಜರ್ ಆಗಿರುತ್ತದೆ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 2 ರಿಂದ 5 ನೇ ಆರೋಪಿ ಪರ ವಕೀಲರಿಂದಃ**

**(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. )**

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**